ಅಧ್ಯಕ್ಷರು.—ಅವರಿಗೂ ಕಾಗದ ಬರೆದಿದ್ದೇನೆ. ಅವರು ಆಸ್ಪತ್ರೆಯಲ್ಲಿದ್ದರು.

ಶ್ರೀ ಎಂ.ಎಸ್. ಕೃಷ್ಣನ್.—ಆಸ್ಪತ್ರೆಯಲ್ಲಿದ್ದವರು ಮದ್ರಾಸಿಗೆ ಹೋಗಿ ಒಂದು ಒಪ್ಪಂದ ವನ್ನು ಮಾಡಿಕೊಂಡು ಬಂದಿದ್ದಾರೆ. 10 ಸಾವಿರ ರೂಪಾಯಿಗಳಷ್ಟು ತೆರಿಗೆಯನ್ನು ಕೊಡು ತ್ತೇವೆಂದು ಒಪ್ಪಂದ ಮಾಡಿಕೊಂಡಿದ್ದಾರೆ. ಅದು ಸರಿಯಾಗಿಲ್ಲವೆಂದು ನಾನು ಹೇಳುತ್ತೇನೆ. ತಮಿಳುನಾಡಿಗೆ ಹೇಗೆ ಹೋಗಿ ಬಂದಿದ್ದಾರೆ. ಶವ ಪರೀಕ್ಷೆ ಮಾಡಿದ ಹಾಗೆ ಇವರು ಮಾಡಿದರೆ ಏನಾಗುತ್ತದೆ. ಮಾನ್ಯ ಶ್ರೀ ಚನ್ನಬಸಪ್ಪನವರು ಎಲೆಕ್ಟ್ರಿಸಿಟಿ ಕೊಡುವುದಿಲ್ಲ, ನೀರು ಕೊಡುವುದಿಲ್ಲ, ಇವರು ಅಲ್ಲಿ ಹೋಗಿ ಒಂದು ಅಗ್ರಿಮೆಂಟ್ ಮಾಡಿಕೊಂಡು ಬಂದಿದ್ದಾರೆ. ಅವರಿಂದ ಸಮಂಜಸ ವಾಗಿ ಉತ್ತರ ಬೇಕು.

Drought Conditions in Arsikere Taluk

ಶ್ರೀ ಎಚ್.ಎಸ್. ಸಿದ್ದಪ್ಪ (ಅರಸೀಕೆರೆ).—ಅರಸೀಕೆರೆ ತಾಲ್ಲೂಕಿನಲ್ಲಿ ಮಳೆ ಬೆಳೆ ಸಾಕಷ್ಟು ಆಗದೆ ಡ್ರಾಟ್ ಕಂಡೀಷನ್ ಆಗಿದೆ. ಆದ್ದರಿಂದ ಅಲ್ಲಿ ಕ್ಷಾಮ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಂಡು ಕಂದಾಯ ವಸೂಲಿಮಾಡುವುದನ್ನು ಮುಂದಕ್ಕೆ ಹಾಕಿ ಎಂಬುದಾಗಿ ಕೇಳಿಕೊಳ್ಳುತ್ತೇನೆ. ನಾನು ಈ ಅಧಿವೇಶನ ಪ್ರಾರಂಭವಾದಾಗಿನಿಂದ ಸುಮಾರು 10 ಕಾಲ್ ಅಟೆನ್ಷನ್ ನೋಟೀಸ್‌ಗಳನ್ನು ಕಳುಹಿಸಿದ್ದೇನೆ. ಇದುವರೆಗೆ ಕೇವಲ ಒಂದೇ ಕಾಲ್ ಅಟೆನ್ಷನ್ ನೋಟೀಸ್ ಬಂದಿದೆ. ಹೋದಸಾರಿ 5 ಕಾಲ್ ಅಟೆನ್ಷನ್ ನೋಟೀಸ್‌ಗಳನ್ನು ಕೊಟ್ಟಿದ್ದಕ್ಕೆ ಒಂದೂ ಬರಲಿಲ್ಲ.

ಅಧ್ಯಕ್ಷರು.—ಈಗ ಸರ್ಕಾರಕ್ಕೆ ಹೋಗಿರುವ ಕಾಲ್ ಅಟೆನ್ಷನ್ ನೋಟೀಸ್‌ಗಳಲ್ಲಿ ಐದಾರು ಈಗಾಗಲೇ ಬಂದಿವೆ.

Speaker's Observation about taking up Call Attention Notices every day

ಶ್ರೀ ಸಿ. ಬೈರೇಗೌಡ.—ಕೋಲಾರ ಜಿಲ್ಲೆಯೊಳಗೆ ಕೆಲವು ಮನೆಗಳಿಗೆ ಬೆಂಕಿ ಬಿದ್ದಿದೆ ಎಂದು ನಾನು ಒಂದು ಕಾಲ್ ಅಟೆನ್ಷನ್ ನೋಟೀಸ್ ಕಳುಹಿಸಿದ್ದೇನೆ. ಅದರ ಬಗ್ಗೆ ಏನಾಯಿತೋ ಗೊತ್ತಿಲ್ಲ.

ಅಧ್ಯಕ್ಷರು.—ರೂಲ್ಸ್ ಪ್ರಕಾರ ನಾನು ಒಂದೇ ಕಾಲ್ ಅಟೆನ್ಷನ್ ನೋಟೀಸನ್ನು ಪ್ರತಿ ಯೊಬ್ಬರಿಂದ ತೆಗೆದುಕೊಳ್ಳಬೇಕು. ಸದಸ್ಯರುಗಳಿಗೆ ಅನುಕೂಲ ಮಾಡಿಕೊಡಬೇಕೆಂದು ನಾನು 3-4 ಕಾಲ್ ಅಟೆನ್ಷನ್ ನೋಟೀಸ್‌ಗಳನ್ನು ತೆಗೆದುಕೊಂಡರೂ, ಇಷ್ಟು ಜಾಗ್ರತೆಯಾಗಿ ಎಲ್ಲದಕ್ಕೂ ಜವಾಬು ತರಿಸಿಕೊಡಬೇಕಾದರೆ, ಸ್ವಲ್ಪ ಸಮಯ ಬೇಕಾಗುತ್ತದೆ. ಮುಂದೆ ಅನೇಕ ಡಿಮ್ಯಾಂಡುಗಳು ಬರುತ್ತವೆ ಆಗ ಮಾನ್ಯ ಸದಸ್ಯರು ಮಾತನಾಡಬಹುದು. ಇಲ್ಲದಿದ್ದರೆ ಒಂದು ದಿವಸ ಪೂರ್ತಿಯಾಗಿ ಕಾಲ್ ಅಟೆನ್ಷನ್ ನೋಟೀಸ್ ಡೆ ಎಂಬುದಾಗಿಯೇ ಮಾಡಬೇಕಾಗುತ್ತದೆ. ತಮಗೆ ಅನುಕೂಲಮಾಡಿ ಕೊಡಬೇಕೆಂದು ನಾನು ಅದಷ್ಟು ಜಾಗ್ರತೆಯಾಗಿ ಅದರ ಬಗ್ಗೆ ಪ್ರಯತ್ನ ಮಾಡುತ್ತೇನೆ.

Replies due to Questions etc.

ಶ್ರೀ ಸಿ. ಬೈರೇಗೌಡ.—ನಮ್ಮ ಪ್ರಶ್ನೆಗಳಿಗೆರ್ಲಾ ಮಂತ್ರಿಗಳೇ ಉತ್ತರ ಕೊಡುವ ಹಾಗೆ ತಾವು ವ್ಯವಸ್ಥೆಮಾಡಬೇಕು. ಏಕೆಂದರೆ ಬಹಳ ಮುಖ್ಯವಲ್ಲದ ಸಬ್ಜೆಕ್ಟ್‌ನ್ನು ಕಳುಹಿಸುವ ಅಭ್ಯಾಸವೂ ಕೆಲವರಿಗೆ ಇದೆಯೆಂದು ಮಂತ್ರಿಗಳು ಹೇಳಬಹುದು. ಕಾಲ್ ಅಟೆನ್ಷನ್ ನೋಟೀಸ್ ಕಳುಹಿಸುವವರ ದೃಷ್ಟಿಯಲ್ಲಿ ಎಲ್ಲವೂ ಮುಖ್ಯವಾಗಿರುತ್ತದೆ. ಆದ್ದರಿಂದ ಅದನ್ನು ವಿಚಾರಮಾಡಿ ನೋಡಬೇಕು. ನಾನು ಕಳುಹಿಸಿರುವುದು ಒಂದೇ ಒಂದು ಕಾಲ್ ಅಟೆನ್ಷನ್ ನೋಟೀಸ್. ಅದನ್ನು ಕಳುಹಿಸಿ ಈಗ ಒಂದು ತಿಂಗಳು ಆಗಿದೆ. ಅದು ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಅದನ್ನು ತಾವು ತೆಗೆಸಿ ನೋಡಿ ಎಂಬುದಾಗಿ ತಮ್ಮನ್ನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು—ಅದನ್ನು ವಿಚಾರ ಮಾಡುತ್ತೇನೆ.